


# ಬೆಂಗಳೂರಿನಲ್ಲಿ ಗಾಂಧೀಜಿಯವರ ಸಾಮಾಜಿಕ ಹೆಜ್ಜೆಗುರುತುಗಳು

**Dr. Shaila KN**
Associate Professor, Department of History, Government Arts College, Bengaluru, Karnataka, India

* Corresponding Author: **Dr. Shaila KN**

**Article Info**

**P-ISSN:** 3051-3502
**E-ISSN:** 3051-3510
**Volume:** 06
**Issue:** 01
**Received:** 12-04-2025
**Accepted:** 22-05-2025
**Published:** 26-06-2025
**Page No:** 57-61

**Abstract**

ಭಾರತದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಮಹಾತ್ಮ ಗಾಂಧೀಜಿಯವರ ಪಾತ್ರವು ಕೇವಲ ರಾಜಕೀಯ ಸ್ವಾತಂತ್ರ್ಯದ ಹೋರಾಟಕ್ಕೆ ಸೀಮಿತವಾಗಿರದೆ, ಸಾಮಾಜಿಕ ಪುನರ್‌ನಿರ್ಮಾಣ, ಸಮಾನತೆ, ಅಸ್ಪೃಶ್ಯತಾ ನಿವಾರಣೆ, ಮಹಿಳಾ ಜಾಗೃತಿ, ಸ್ವಾವಲಂಬನೆ ಹಾಗೂ ನೈತಿಕ ಮೌಲ್ಯಗಳ ಪ್ರತಿಷ್ಠಾಪನೆಯೊಂದಿಗೆ ಆಳವಾಗಿ ಸಂಬಂಧಿಸಿದೆ. ಈ ವಿಶಾಲವಾದ ಗಾಂಧೀ ಚಿಂತನೆಯು ಕರ್ನಾಟಕದ ವಿವಿಧ ಭಾಗಗಳಲ್ಲಿ ಪ್ರತಿಫಲಿಸಿದಂತೆ, ಬೆಂಗಳೂರಿನ ಜನರ ಸಾಮಾಜಿಕ ಮತ್ತು ಸಾರ್ವಜನಿಕ ಬದುಕಿನ ಮೇಲೆಯೂ ಗಮನಾರ್ಹವಾದ ಪ್ರಭಾವವನ್ನು ಬೀರಿತು. ಗಾಂಧೀಜಿಯವರ ಬೆಂಗಳೂರಿನ ಭೇಟಿಗಳು ಮತ್ತು ಅವರೊಂದಿಗೆ ಬೆಸೆದುಕೊಂಡಿದ್ದ ಸ್ಥಳೀಯ ನಾಯಕರು, ಸಮಾಜ ಸುಧಾರಕರು ಹಾಗೂ ಮಹಿಳಾ ಕಾರ್ಯಕರ್ತರ ಚಟುವಟಿಕೆಗಳು ನಗರದ ಸಾಮಾಜಿಕ ಜಾಗೃತಿಗೆ ಹೊಸ ಆಯಾಮವನ್ನು ನೀಡಿದವು.

ಈ ಲೇಖನವು ಬೆಂಗಳೂರಿನಲ್ಲಿ ಗಾಂಧೀಜಿಯವರ ಸಾಮಾಜಿಕ ಚಿಂತನೆಗಳು ಮತ್ತು ಸಮಾಜಮುಖಿ ಕಾರ್ಯಗಳ ಪ್ರತಿಫಲನವನ್ನು ಪರಿಶೀಲಿಸುತ್ತದೆ. ಗಾಂಧೀಜಿಯವರ ವಿಚಾರಗಳು ಮತ್ತು ಭಾಷಣಗಳು ರಾಜಕೀಯ ಸಭೆಗಳ ಮಟ್ಟದಲ್ಲಿ ಉಳಿಯದೆ ಬದುಕಿನ ವಿವಿಧ ಕ್ಷೇತ್ರಗಳಲ್ಲಿ ಹೇಗೆ ಪ್ರತಿಧ್ವನಿಸಿದವು ಎಂಬುದನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ವಿಶೇಷ ವಾಗಿ ಮಹಿಳೆಯರನ್ನು ರಾಷ್ಟ್ರೀಯ ಮತ್ತು ಸಾಮಾಜಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವಂತೆ ಪ್ರೇರೇಪಿಸಿದ ಗಾಂಧೀ ಚಿಂತನೆಯು, ಮಹಿಳಾ ಜಾಗೃತಿಯ ವಿಸ್ತರಣೆಗೆ ಪೂರಕವಾದ ಸಾಮಾಜಿಕ ವಾತಾವರಣವನ್ನು ರೂಪಿಸಿತು

ಬೆಂಗಳೂರಿನ ಸಾರ್ವಜನಿಕ ವಲಯದಲ್ಲಿ ಗಾಂಧೀಜಿಯವರ ಚಿಂತನೆಗೆ ದೊರೆತ ಸ್ಪಂದನೆ, ಸ್ಥಳೀಯ ಸಂಘಟನೆಗಳ ಚಟುವಟಿಕೆಗಳು ಹಾಗೂ ಮಹಿಳೆಯರು ಮತ್ತು ಸಾಮಾಜಿಕವಾಗಿ ಹಿಂದುಳಿದ ವರ್ಗಗಳ ಕುರಿತು ರೂಪುಗೊಂಡ ಹೊಸ ಸಾಮಾಜಿಕ ಸಂವೇದನೆಗಳನ್ನು ಈ ಲೇಖನದಲ್ಲಿ ಚರ್ಚಿಸಲಾಗಿದೆ.

**DOI:** https://doi.org/10.54660/IJMER.2025.6.1.57-61

**Keywords**: ಗಾಂಧೀಜಿ, ಪ್ರವಾಸ, ಅಸ್ಪೃಶ್ಯತಾ ನಿವಾರಣೆ, ಮಹಿಳೆ, ಸಂದೇಶ

## ಪರಿಚಯ:

ಗಾಂಧೀಜಿಯವರು ಬೆಂಗಳೂರಿಗೆ ನೀಡಿದ ಭೇಟಿಗಳನ್ನು ಸಾಮಾಜಿಕ ಬದಲಾವಣೆಯ ವಿಶಾಲ ಹಿನ್ನೆಲೆಯಲ್ಲಿ ಅರ್ಥೈಸಿಕೊಳ್ಳುವುದು ಅಗತ್ಯವಾಗಿದೆ.

ಗೋಪಾಲಕೃಷ್ಣ ಗೋಖಲೆಯವರು ಗಾಂಧೀಜಿಯವರಲ್ಲಿ ಸುಪ್ತವಾಗಿದ್ದ ಅಪಾರ ಶಕ್ತಿಯನ್ನು ಮನಗಂಡು, "ನೀವು ಭಾರತದ ಪರವಾಗಿ ಮಹತ್ವದ ಕಾರ್ಯಗಳನ್ನು ಸಾಧಿಸಬೇಕಾಗಿರುವುದರಿಂದ, ಮೊದಲು ಒಂದು ವರ್ಷ ಕಾಲ ದೇಶಾದ್ಯಂತ ಪ್ರವಾಸ ಮಾಡಿ, ದೇಶದ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಪರಿಸ್ಥಿತಿಯನ್ನು ಅರಿತುಕೊಂಡ ನಂತರ ಸಾರ್ವಜನಿಕ ಕಾರ್ಯವನ್ನು ಪ್ರಾರಂಭಿಸಿ" ಎಂದು ಸಲಹೆ ನೀಡಿದರು.

೧೯೧೫ರ ಫೆಬ್ರವರಿ ೧೯ರಂದು ಗೋಖಲೆಯವರು ಅಕಾಲಿಕವಾಗಿ ನಿಧನರಾದ ನಂತರ, ಗಾಂಧೀಜಿಯವರು ತಮ್ಮ ಮಾರ್ಗದರ್ಶಕರ ಸಲಹೆಯಂತೆ ದೇಶಾದ್ಯಂತ ಪ್ರವಾಸ ಕೈಗೊಂಡು ಭಾರತದ ಜನಜೀವನ ಹಾಗೂ ವಾಸ್ತವ ಪರಿಸ್ಥಿತಿಯನ್ನು ಅರಿಯಲು ಪ್ರಯತ್ನಿಸಿದರು. ಈ ಪ್ರವಾಸದ ಸಂದರ್ಭದಲ್ಲಿ ೧೯೧೫ರಲ್ಲಿ ಗಾಂಧೀಜಿಯವರು ಬೆಂಗಳೂರಿಗೂ ಭೇಟಿ ನೀಡಿದರು. ಬೆಂಗಳೂರಿನಲ್ಲಿನ ಅವರ ಪ್ರವಾಸವು ಮುಂದಿನ ದಿನಗಳಲ್ಲಿ ನಗರದ ಸಾಮಾಜಿಕ ಹಾಗೂ ಸಾರ್ವಜನಿಕ ಬದುಕಿನ ಮೇಲೆ ಮಹತ್ವದ ಪ್ರಭಾವ ಬೀರಿತು.

ಬೆಂಗಳೂರಿನಲ್ಲಿ ಗೋಖಲೆಯವರ ಆದರ್ಶಗಳನ್ನು ಕಾರ್ಯರೂಪಕ್ಕೆ ತರಬೇಕು ಎಂದು ತರುಣರ ತಂಡವು ಡಿ. ವಿ. ಗುಂಡಪ್ಪನವರ ನೇತೃತ್ವದಲ್ಲಿ ಮೈಸೂರು ಸೋಷಿಯಲ್ ಸರ್ವೀಸ್ ಲೀಗ್ (ಮೈಸೂರು ದೇಶಸೇವಾ ಸಂಘ) ಎಂಬ ಹೆಸರಿನ ಸಂಸ್ಥೆಯನ್ನು ಸ್ಥಾಪಿಸಿದರು. ಕೆ.ಎಸ್. ಕೃಷ್ಣಯ್ಯರ್, ಮೋಕ್ಷಗುಂಡಂ ಕೃಷ್ಣಮೂರ್ತಿ, ಬೇಲೂರು ಶ್ರೀನಿವಾಸಯ್ಯಂಗಾರ್, ಎ. ಆರ್. ನಾಗೇಶ್ವರ ಅಯ್ಯರ್, ನರಸಿಂಹಮೂರ್ತಿ, ಸೂರ್ಯಪ್ರಕಾಶ್, ಬಿ. ವಿ. ಸುಬ್ಬರಾವ್, ಕೆ. ಭೀಮರಾವ್, ಮೊದಲಾದವರು ಈ ಸಂಸ್ಥೆಯ ಸದಸ್ಯರಾಗಿದ್ದರು. ಡಿ. ವಿ. ಗುಂಡಪ್ಪನವರು 'ದಿ ಕರ್ನಾಟಕ' ಎಂಬ ಇಂಗ್ಲಿಷ್ ಪಾಕ್ಷಿಕ ಪತ್ರಿಕೆಯನ್ನು ಬೆಂಗಳೂರಿನಿಂದ ಹೊರಡಿಸುತ್ತಿದ್ದರು. ದಕ್ಷಿಣ ಆಫ್ರಿಕಾದಲ್ಲಿದ್ದ ಭಾರತೀಯರ ಸಹಾಯ ನಿಧಿಗಾಗಿ ಡಿ. ವಿ. ಜಿ. ಅವರು 'ದಿ ಕರ್ನಾಟಕ' ಸಂಚಿಕೆಗಳಲ್ಲಿ ಭಿನ್ನವಿಸಿಕೊಂಡ ಮೇರೆಗೆ ಸಾವಿರದ ಆರುನೂರು ರೂಪಾಯಿ ಸಂಗ್ರಹವಾಗಿತ್ತು. ಆಗ ಮೈಸೂರಿನ ದಿವಾನರಾಗಿದ್ದ ಎಂ. ವಿಶ್ವೇಶ್ವರಯ್ಯನವರು ಈ ನಿಧಿಗೆ ಇನ್ನೂರು ರೂಪಾಯಿ ನೀಡಿ ಒಟ್ಟು ಸಾವಿರದ ಎಂಟುನೂರು ರೂಪಾಯಿಯನ್ನು ಆಗ ಪತ್ರಕರ್ತರಾಗಿದ್ದ ಜಿ. ಎ. ನಟೇಶನ್ ಅವರ ಮೂಲಕ ದಕ್ಷಿಣ ಆಫ್ರಿಕಾದಲ್ಲಿನ ಭಾರತೀಯ ಸಹಾಯ ನಿಧಿಗೆ ಹಣ ಸಂದಾಯ ಮಾಡಲಾಯಿತು. ಕನ್ನಡಿಗರು ಸಲ್ಲಿಸಿದ್ದ ಆ ಕೊಡುಗೆಯನ್ನು ಗಾಂಧೀಜಿ ಮರೆತರಲಿಲ್ಲ ಮದ್ರಾಸಿಗೆ ಆಗಮಿಸಿದ್ದ ಗಾಂಧೀಜಿವರನ್ನು ಬೆಂಗಳೂರಿಗೆ ಕರೆಯಿಸಿ ಅಹ್ವಾನಿಸಿ ಮೈಸೂರು ದೇಶಸೇವಾ ಸಂಘವನ್ನು ಅವರಿಂದಲೇ ಉದ್ಘಾಟಿಸಬೇಕೆಂದು ಡಿ. ವಿ. ಜಿ. ಅವರು ನಟೇಶನ್ ಅವರೊಡನೆ ಪತ್ರ ವ್ಯವಹಾರ ನಡೆಸಿ ಆಹ್ವಾನಿಸಿದಾಗ ಗಾಂಧೀಜಿಯವರು ೧೯೧೫, ಮೇ ಎಂಟರಂದು ಬೆಂಗಳೂರಿಗೆ ಬರಲು ಒಪ್ಪಿಕೊಂಡರು.

### ಬೆಂಗಳೂರಿಗೆ ಗಾಂಧೀಜಿಯವರ ಪ್ರಥಮ ಭೇಟಿ

ಸರಳ ಗುಜರಾತಿ ಉಡುಗೆಯಾದ ಉ ದ್ದನೆಯ ಅಂಗಿ ಕಚ್ಚೆ ಪಂಚೆ, ಮತ್ತು ಕಾಥೇವಾಡದ ರುಮಾಲು ಧರಿಸಿದ್ದ ಗಾಂಧೀಯವರು ತನ್ನ ರಾಜಕೀ ಯ ಗುರುಗಳಾಗಿದ್ದ ಗೋಖಲೆಯವರ ನಿಧನದಿಂದಾಗಿ ಒಂದು ವರ್ಷಗಳ ಕಾಲ ಚಪ್ಪಲಿಯನ್ನು ಧರಿಸದೆ ಓರ್ವ ಗುಜರಾತಿ ರೈತನ ಹಾಗೆ ಕಂಡು ಬಂದರು. ಗಾಂಧೀಜಿಯವರ ಬೆಂಗಳೂರಿನ ಪ್ರಥಮ ಸಾರ್ವಜನಿಕ ಕಾರ್ಯಕ್ರಮವಾಗಿ ಮೈಸೂರು ದೇಶಸೇವಾ ಸಂಘದ ಉದ್‌ಘಾಟನಾ ಸಮಾರಂಭವು ಮಹತ್ವ ಪಡೆದಿದೆ. ೧೯೧೫ರ ಮೇ ೮ರಂದು ಶನಿವಾರ ಬೆಳಿಗ್ಗೆ ಸುಮಾರು ೯ ಗಂಟೆಗೆ ಬೆಂಗಳೂರಿನ ಸರ್ಕಾ ರಿ ಕಲಾ ಕಾಲೇಜಿನ ವಿಶಾಲ ಸಭಾಂಗಣದಲ್ಲಿ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಗಾಂಧೀಜಿಯವರು ಗೋಪಾಲಕೃಷ್ಣ ಗೋಖಲೆಯವರ ಭಾವಚಿತ್ರವನ್ನು ಅನಾವರಣಗೊಳಿಸುವ ಮೂಲಕ ಮೈಸೂರು ದೇಶಸೇವಾ ಸಂಘದ ಉದ್ಘಾಟನೆಯನ್ನು ನೆರವೇರಿಸಿದರು. ಈ ಐತಿಹಾಸಿಕ ಕಾರ್ಯಕ್ರಮದಲ್ಲಿ ಮೈಸೂರು ಸರ್ಕಾರದ ಅಧಿಕಾರಿಗಳು, ಸ್ಥಳೀಯ ಸಾಹುಕಾರರು, ವಕೀಲರು, ವಿದ್ಯಾರ್ಥಿಗಳು ಹಾಗೂ ಬೆಂಗಳೂರಿನ ಗಣ್ಯ ನಾಗರಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಸಭೆಯನ್ನುದ್ದೇಶಿಸಿ ಮಾತನಾಡಿದ ಗಾಂಧೀಜಿಯವರು, ಕೇವಲ ಆಡಂಬರದ ಕಾರ್ಯಕ್ರಮಗಳು ಅಥವಾ ಜನಪ್ರಿಯತೆಯ ಆಶಯದಿಂದ ಸಾರ್ವಜನಿಕ ಸೇವೆಗೆ ಮುಂದಾಗಬಾರದು; ಬದಲಾಗಿ ದೇಶಸೇವೆಯನ್ನು ಯಥಾರ್ಥವಾದ ಕರ್ತವ್ಯಪ್ರಜ್ಞೆ ಮತ್ತು ನಿಸ್ವಾರ್ಥ ಮನೋಭಾವದಿಂದ ಕೈಗೊಳ್ಳಬೇಕು ಎಂದು ಕರೆ ನೀಡಿದರು. ದೇಶಸೇವೆಯಲ್ಲಿ ವ್ಯಕ್ತಿಗತ ಕೀರ್ತಿ ಅಥವಾ ಪ್ರತಿಷ್ಠೆಗಿಂತ ಸೇವಾ ಮನೋಭಾವವೇ ಮುಖ್ಯವೆಂಬ ಸಂದೇಶವನ್ನು ಅವರು ಸಾರಿದರು. ಹೀಗೆ ೧೯೧೫ರ ಮೇ ೮ರಂದು ಬೆಂಗಳೂರಿನಲ್ಲಿ ನಡೆದ ವಿವಿಧ ಕಾರ್ಯಕ್ರಮಗಳು ಗಾಂಧೀಜಿಯವರ ಸಾರ್ವಜನಿಕ ಜೀವನದ ಆರಂಭಿಕ ಹಂತದಲ್ಲಿ ನಗರದೊಂದಿಗೆ ರೂಪುಗೊಂಡ ಮಹತ್ವದ ಸಂಬಂಧಕ್ಕೆ ಸಾಕ್ಷಿಯಾದವು. ಅದೇ ದಿನ ಸಂಜೆ ಸುಮಾರು ೫.೩೦ಕ್ಕೆ ಬೆಂಗಳೂರಿನ ಲಾಲ್‌ಬಾಗ್‌ನ ಗಾಜಿನ ಮನೆಯಲ್ಲಿ ಸಾರ್ವಜನಿಕ ಸಭೆಯನ್ನು ಆಯೋಜಿಸಲಾಗಿತ್ತು. ಬೆಂಗಳೂರಿನ ನಾಗರಿಕರ ಪರವಾಗಿ ಅಂದಿನ ಪೌರಸಭೆಯ ಅಧ್ಯಕ್ಷ ರಾದ ದಿವಾನ್ ಬಹದ್ದೂರ್ ಪುಟ್ಟಣ್ಣ ಶೆಟ್ಟಿಯವರು ಗಾಂಧೀಜಿಯವರನ್ನು ಸ್ವಾಗತಿಸಿದರು.

### ಖಿಲಾಫತ್ ಚಳುವಳಿಯ ನೆಲೆಯಲ್ಲಿ

ಭಾರತದಲ್ಲಿನ ಎಲ್ಲ ಮುಸ್ಲಿಂ ಬಾಂಧವರಿಗೆ ಖಿಲಾಫತ್ ಚಳುವಳಿಯ ಬಗ್ಗೆ ತಿಳಿಸಲು ಗಾಂಧಿಯವರು ಮೊಹಮ್ಮದಾಲಿ, ಶೌಕತಾಲಿ ಮತ್ತು ಯಾಕುಬ್ ಹುಸೇನ್ ಅವರೊಡನೆ ದಕ್ಷಿಣ ಭಾರತದಲ್ಲಿ ಸಂಚರಿಸುತ್ತಾ ಅಗೋಸ್ಟ್ ೨೧ರಂದು ದಿನಾಂಕ ಶನಿವಾರ ಬೆಳಗ್ಗೆ ಸೇಲಂ ಮಾರ್ಗವಾಗಿ ಅಪರಾಹ್ನ ಬೆಂಗಳೂರಿಗೆ ಆಗಮಿಸಿದರು. ಇದು ಬೆಂಗಳೂರಿಗೆ ಗಾಂಧೀಜಿಯವರ ಎರಡನೇ ಭೇಟಿಯಾಗಿತ್ತು.

ಇದಲ್ಲದೆ, ಬೆಂಗಳೂರಿನ ದಂಡು ಪ್ರದೇಶದ ರೈಲ್ವೆ ನಿಲ್ದಾಣದ ಹಿಂಭಾಗದಲ್ಲಿರುವ ಬೆನ್ಸನ್ ಟೌನ್‌ನ ಖುದ್ದೂಸ್ ಸಾಹೇಬ್ ಈದ್ಗ ಮೈದಾನದಲ್ಲಿಯೂ ಗಾಂಧೀಜಿಯವರು ಸಾರ್ವಜನಿಕರನ್ನುದ್ದೇಶಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ಅವರು ಉರ್ದು ಭಾಷೆಯಲ್ಲಿ ಭಾಷಣ ಮಾಡಿದ್ದು, ವಿವಿಧ ಭಾಷಾ ಸಮುದಾಯಗಳ ಜನರನ್ನು ತಲುಪುವ ಅವರ ಪ್ರಯತ್ನಕ್ಕೆ ಒಂದು ವಿಶಿಷ್ಟ ಉದಾಹರಣೆಯಾಗಿದೆ.

ಗಾಂಧೀಜಿಯವರ ಭಾಷಣವನ್ನು ಕೇಳಲು ವಿದೇಶೀ ಬಟ್ಟೆಗಳ ವ್ಯಾಪಾರ ಮಾಡುತ್ತಿದ್ದ ಒಬೇದುಲ್ಲಾ ಎಂಬ ಯುವಕನೊಬ್ಬನು ಆಗಮಿಸಿದ್ದನು. ಗಾಂಧೀಜಿಯವರ ಭಾಷಣದಿಂದ ಪ್ರೇರಿತನಾದ ಈತ, ತನ್ನ ಅಂಗಡಿಯಲ್ಲಿದ್ದ ವಿದೇಶಿ ಬಟ್ಟೆಗಳನ್ನು ಬೆಂಗಳೂರಿನ ಶಿವಾಜಿನಗರ ಸ್ಟೇಡಿಯಂ (ಚೋಟ ಮೈದಾನ)ದಲ್ಲಿ ಸುಟ್ಟು ಹಾಕಿದನು. ಖಾದಿ ಅಂಗಡಿಯನ್ನು ತೆರೆದು ನಂತರ ವ್ಯಾಪಾರ ಆರಂಭಿಸಿದನು. ೧೯೨೧ ರಲ್ಲಿ ನಡೆದ ಸ್ವದೇಶಿ ಚಳವಳಿಯ ಕಾಲದಲ್ಲಿ ಒಬೇದುಲ್ಲಾ, ಅಬ್ದುಲ್ ಸುಬಾನ್ ಮತ್ತು ಇತರೆ ಎಂಟು ಜನರೊಂದಿಗೆ ಸೇರಿ ವಿದೇಶಿ ವಸ್ತುಗಳನ್ನು ಮಾರಾಟ ಮಾಡುತ್ತಿದ್ದ ಕಮರ್ಷಿಯಲ್ ಸ್ಟ್ರೀಟ್ ಮತ್ತು ಬ್ರಾಡ್‌ವೇ ರಸ್ತೆಗಳಲ್ಲಿನ ಅಂಗಡಿಗಳ ಮುಂದೆ ಪ್ರತಿಭಟನೆ ಮಾಡಿದ್ದಕ್ಕಾಗಿ ಒಂಬತ್ತು ತಿಂಗಳು ಜೈಲು ವಾಸವನ್ನು ಒಬೇದುಲ್ಲಾ ಅನುಭವಿಸಿದನು.

### ಖಾದಿ ಬಟ್ಟೆ ಮತ್ತು ಸ್ವದೇಶಿ ವಸ್ತುಗಳ ಬಳಕೆಗೆ ಉತ್ತೇಜನ

ಮೂರನೇ ಬಾರಿಗೆ ೧೯೨೭ರಲ್ಲಿ ಬೆಂಗಳೂರಿಗೆ ಗಾಂಧೀಜಿಯವರು ಭೇಟಿ ನೀಡಿದರು. ಈ ಸಂದರ್ಭದಲ್ಲಿ ಅವರು ತಮ್ಮ ಆರೋಗ್ಯದ ವಿಚಾರವಾಗಿ ಕುಮಾರಕೃಪಾ ಭವನದಲ್ಲಿ ಹಾಗೂ ನಂದಿಬೆಟ್ಟದಲ್ಲಿ ತಂಗಿದ್ದರು. ನಂದಿಬೆಟ್ಟದಲ್ಲಿ ವಾಸ್ತವ್ಯ ಹೂಡಿದ್ದ ಸಂದರ್ಭದಲ್ಲಿ ಅವರನ್ನು ಭೇಟಿ ಮಾಡಿದ ಮಹಿಳೆಯರಿಗೆ ಖಾದಿ ಬಟ್ಟೆಯನ್ನು

ಧರಿಸುವಂತೆ ಮತ್ತು ಸ್ವದೇಶಿ ವಸ್ತುಗಳ ಬಳಕೆಯನ್ನು ಉತ್ತೇಜಿಸುವಂತೆ ಗಾಂಧೀಜಿಯವರು ಸಂದೇಶ ನೀಡಿದರು.

ಈ ಭೇಟಿಯ ಸಂದರ್ಭದಲ್ಲಿ ಗಾಂಧೀಜಿಯವರು ಅಸ್ಪೃಶ್ಯತಾ ನಿವಾರಣೆ, ಸಾಮಾಜಿಕ ಸಮಾನತೆ ಮತ್ತು ಸಮಾಜ ಸುಧಾರಣೆಯ ಅಗತ್ಯತೆ ಕುರಿತು ವಿವಿಧ ಸಭೆಗಳಲ್ಲಿ ಮಾತನಾಡಿದರು. ಅಸ್ಪೃಶ್ಯತೆಯಂತಹ ಸಾಮಾಜಿಕ ಅನಿಷ್ಟಗಳನ್ನು ನಿವಾರಿಸುವುದು ಪ್ರತಿಯೊಬ್ಬರ ಕರ್ತವ್ಯವೆಂದು ಅವರು ಪ್ರತಿಪಾದಿಸಿದರು. ಅವರ ಭಾಷಣಗಳು ಸಮಾಜದಲ್ಲಿ ಸಮಾನತೆ, ಸಹೋದರತ್ವ ಮತ್ತು ಮಾನವೀಯ ಮೌಲ್ಯಗಳನ್ನು ಬೆಳೆಸುವ ಉದ್ದೇಶವನ್ನು ಹೊಂದಿದ್ದವು. ಹೀಗೆ ೧೯೨೭ರ ಬೆಂಗಳೂರಿನ ಗಾಂಧೀಜಿಯವರ ಖಾದಿ ಪ್ರಚಾರದ ಜೊತೆಗೆ ಅಸ್ಪೃಶ್ಯತಾ ನಿವಾರಣೆ ಮತ್ತು ಸಾಮಾಜಿಕ ಪರಿವರ್ತನೆಯ ಸಂದೇಶವನ್ನು ಜನರಿಗೆ ತಲುಪಿಸಿದ ಮಹತ್ವದ ಸಂದರ್ಭವಾಗಿತ್ತು.

ಭೇಟಿಯ ಕೊನೆಯ ದಿವಸವಾದ ಹತ್ತೊಂಬತ್ತನೇ ಜೂನ್, ೧೯೨೭ ರಂದು ಡೇರಿ ಫಾರ್ಮ್ ನೋಡಲು ಹೋಗಿ ಹೊರಡುವ ಸಂದರ್ಭದಲ್ಲಿ ಸಂದರ್ಶಕರ ಪುಸ್ತಕದಲ್ಲಿ ಎಂ. ಕೆ. ಗಾಂಧಿ ಫಾರ್ಮರ್ ಸಾಬರಮತಿ ಎಂದು ಬರೆದಿದ್ದರು. ಆದರೆ ಆಡಳಿತ ವರ್ಗದವರು ಗಾಂಧೀಜಿ ಸಹಿ ಮಾಡಿದ್ದರ ಕೆಳಗೆ ಅವರ ವಿದ್ಯಾರ್ಹತೆಯನ್ನು ಬಿ. ಎಲ್. ಬಿ ಬಾರ್ ಅಟ್ ಲಾ ಎಂದು ತೋರಿಸಿದರು. ಈ ವಿಷಯ ತಿಳಿದ ಗಾಂಧೀಜಿ, ನಾನೊಬ್ಬ ರೈತನಾಗಿ ನಿಮ್ಮ ಡೇರಿಗೆ ಭೇಟಿ ಕೊಟ್ಟಿದ್ದೇನೆ. ಅದನ್ನೇ ನಿಮ್ಮ ಪುಸ್ತಕದ ಸಂದರ್ಶಕರ ಪುಸ್ತಕದಲ್ಲಿ ದಾಖಲಿಸಿದ್ದೇನೆ ಎಂದು ತಿಳಿಸಿದರು. ಈ ಡೇರಿಯು ಅಡುಗೋಡಿಯಲ್ಲಿನ ಮೈಕೋ ಕಾರ್ಖಾನೆಯ ಮುಂಭಾಗದಲ್ಲಿದ್ದು ನ್ಯಾಷನಲ್ ಡೇರಿ ರಿಸರ್ಚ್ ಇನ್ಸಿಟ್ಯೂಟ್ ಎಂಬ ಹೆಸರಿನೊಂದಿಗೆ ಕಾರ್ಯ ನಿರ್ವಹಿಸುತ್ತಿದೆ. ಖಾದಿ ವಸ್ತು ಪ್ರದರ್ಶನದ ಸಂದರ್ಭದಲ್ಲಿ ಭಾರತದ ಹಸಿದ ಲಕ್ಷಾಂತರ ಜನರ ಸಂದೇಶವೇ ಖಾದಿ ಎಂದರು ಸಾರ್ವಜನಿಕ ಸಭೆಯಲ್ಲಿ ಮಾತನಾಡಿ ಖಾದಿ ಬಟ್ಟೆಯನ್ನು ತೊಡಲು ಪ್ರೋತ್ಸಾಹ ನೀಡಬೇಕೆಂದರು.

೧೯೨೭ರ ಖಾದಿ ಪ್ರದರ್ಶನವು ಮಹಿಳೆಯರ ಭಾಗವಹಿಸುವಿಕೆಯಿಂದ ವಿಶೇಷ ಗಮನ ಸೆಳೆಯಿತು. 'ನೂಲುವ ರಾಣಿ' ಎಂದು ಪ್ರಸಿದ್ಧರಾಗಿದ್ದ ಬೋಂತಲು ಕೋಡು ಸೂರಮ್ಮ ಹಾಗೂ ದೃಷ್ಟಿಹೀನರಾಗಿದ್ದ ಕರ್ನಾಟಕದ ಬಸವ್ವಸುಳದಾಳ ಅವರು ಸಾರ್ವಜನಿಕರ ಮುಂದೆ ರಾಟೆಯಲ್ಲಿ ನೂಲು ನೆಯ್ದರು. ಅವರ ನೂಲುವ ಕೌಶಲ್ಯವನ್ನು ಜನರು ಆಸಕ್ತಿಯಿಂದ ವೀಕ್ಷಿಸಿದರು. ಸರ್ದಾರ್ ವಲ್ಲಭಭಾಯಿ ಪಟೇಲರ ಪುತ್ರಿ ಮಣಿಬೆಹನ್ ಪಟೇಲ್ ಅವರು ಪ್ರದರ್ಶನದ ಒಂದು ವಿಭಾಗದ ಮೇಲ್ವಿಚಾರಣೆಯನ್ನು ವಹಿಸಿದ್ದರು. ಈ ಮೂಲಕ ಖಾದಿ ಚಳವಳಿಯಲ್ಲಿ ಮಹಿಳೆಯರೂ ಸಕ್ರಿಯವಾಗಿ ಪಾಲ್ಗೊಂಡಿರುವುದು ಸ್ಪಷ್ಟವಾಯಿತು. ೧೯೨೭ರ ಜುಲೈ ೧೧ರಂದು ಕಸ್ತೂರಬಾ ಗಾಂಧಿಯವರ ಅಧ್ಯಕ್ಷತೆಯಲ್ಲಿ ಬೆಂಗಳೂರಿನಲ್ಲಿ ಮಹಿಳಾ ಸಮ್ಮೇಳನ ನಡೆಯಿತು. ಮೈಸೂರು ಸಂಸ್ಥಾನದ ಬಾಲಿಕಾ ಪ್ರೌಢಶಾಲೆಗಳ ಮುಖ್ಯ ನಿರೀಕ್ಷಕರಾಗಿದ್ದ ಶ್ರೀಮತಿ ರಂಗಮ್ಮ ಅವರು ಸಮ್ಮೇಳನದಲ್ಲಿ ಮಾತನಾಡಿ, ಪ್ರತಿಯೊಬ್ಬ ಮಹಿಳೆಯೂ ಹಿಂದಿ ವಿದ್ಯಾಭ್ಯಾಸವನ್ನು ಕಲಿಯುವುದು ಅಗತ್ಯವೆಂದು ತಮ್ಮ ಅನುಭವದ ಆಧಾರದ ಮೇಲೆ ತಿಳಿಸಿದರು. ನಂತರ ಶ್ರೀಮತಿ ಉಮಾಬಾಯಿ ಕುಂದಾಪುರ, ಕೃಷ್ಣಬಾಯಿ ಪಣಜೀಕರ್, ಮೆಹ್ತಾ, ಶ್ರೀರಂಗ, ಶ್ರೀನಿವಾಸರಂಗ ಮಂದಿರದ ಸಿಂಗಮ್ಮ ಮೊದಲಾದವರು ವಿವಿಧ ವಿಷಯಗಳ ಕುರಿತು ಮಾತನಾಡಿದರು. ಮಹಿಳೆಯರ ಶಿಕ್ಷಣ, ಸ್ವಾವಲಂಬನೆ ಮತ್ತು ಸಾಮಾಜಿಕ ಪ್ರಗತಿಯ ಅಗತ್ಯತೆಯನ್ನು ಒತ್ತಿಹೇಳಿದ ಈ ಸಮ್ಮೇಳನವು ಬೆಂಗಳೂರಿನ ಮಹಿಳಾ ಚಳವಳಿಯ ಇತಿಹಾಸದಲ್ಲಿ ಗಮನಾರ್ಹ ಘಟನೆಯಾಯಿತು.

ಸಮ್ಮೇಳನನದ ಅಂತ್ಯದಲ್ಲಿ, ಬೆಂಗಳೂರಿನಲ್ಲಿ ನಡೆದ ಈ ಮಹತ್ವದ ಮಹಿಳಾ ಸಸಮ್ಮೇಳನದ ಮುಂದುವರಿಕೆಯಾಗಿ ದ್ವಿತೀಯ ಮಹಿಳಾ ಸಮ್ಮೇಳನವನ್ನು ಹುಬ್ಬಳ್ಳಿಯಲ್ಲಿ ನಡೆಸುವುದಾಗಿ ಭಗಿನಿ ಮಂಡಲದ ಸಂಚಾಲಕರಾದ ಶ್ರೀಮತಿ ಉಮಾಬಾಯಿ ಕುಂದಾಪುರ ಅವರು ಘೋಷಿಸಿ, ಎಲ್ಲರನ್ನೂ ಅಹ್ವಾನಿಸಿದರು. ಉಮಾಬಾಯಿ ಕುಂದಾಪುರ ಅವರ ಭಾಷಣದಿಂದ ಗಾಂಧೀಜಿಯವರು ಸಂತೋಷಗೊಂಡರು. ಈ ಸಮ್ಮೇಳನವು ಮಹಿಳೆಯರ ಸಂಘಟನೆ, ಶಿಕ್ಷಣ ಮತ್ತು ಸಾಮಾಜಿಕ ಚಟುವಟಿಕೆಗಳಿಗೆ ಹೊಸ ಪ್ರೇರಣೆಯನ್ನು ನೀಡಿತು.

ಮಹಿಳಾ ಸೇವಾ ಸಮಾಜದ ಕಾರ್ಯಕ್ರಮದಲ್ಲಿ ಖಾದಿ ಬಟ್ಟೆ ತೊಟ್ಟು ಬಂದಿದ್ದ ಮಹಿಳೆಯರನ್ನು ಕಂಡು ಗಾಂಧೀಜಿ ಆಶ್ಚರ್ಯಚಕಿತರಾದರು. ಅಧ್ಯಕ್ಷೆ ಪಾರ್ವತಮ್ಮನವರು ಒಂಭತ್ತು ಗಜದ ಖಾದಿ ಸೀರೆಯನ್ನು ಅಯ್ಯರ್ ಶೈಲಿಯಲ್ಲಿ ಧರಿಸಿದ್ದರು. ಹರಿಜನರ ಉದ್ಧಾರಕ್ಕಾಗಿ ಧನಸಹಾಯ ಮಾಡಲು ಗಾಂಧೀಜಿ ಕೋರಿದರು. ಗಾಂಧೀಜಿಯವರ ಮಾತುಗಳನ್ನು ಕೇಳಿ ಮಹಿಳೆಯರು 'ನಾ ಮುಂದು, ತಾ ಮುಂದು' ಎಂದು ಹಿಂದು ಮುಂದು ನೋಡದೆ ಸ್ವಯಂಪ್ರೇರಣೆಯಿಂದ ತಾವು ಧರಿಸಿದ್ದ ಆಭರಣಗಳನ್ನು ಅರ್ಪಿಸಲು ಪ್ರಾರಂಭಿಸಿದರು. ಮೊದಲಿಗೆ ಪಾರ್ವತಮ್ಮನವರು ತಮ್ಮ ಕೈಯಲ್ಲಿದ್ದ ಬಂಗಾರದ ಬಳೆಗಳನ್ನು ಕಾಣಿಕೆಯಾಗಿ ಕೊಟ್ಟರು.

ಬೆಂಗಳೂರಿನ ಪ್ರವಾಸದಲ್ಲಿ ಗಾಂಧೀಜಿಯವರು ಯುನೈಟೆಡ್ ಥಿಯಾಲಾಜಿಕಲ್ ಕಾಲೇಜು ಹಾಗೂ ಮಿಥಿಕ್ ಸೊಸೈಟಿಗೆ ಭೇಟಿ ನೀಡಿದರು. ಈ ಸಂದರ್ಭದಲ್ಲಿ ಅವರು ಹರಿಜನೋದ್ಧಾರ ಮತ್ತು ಸಾಮಾಜಿಕ ಸಮಾನತೆಯ ಕುರಿತು ಮಾತನಾಡಿ, ಸಮಾಜದಲ್ಲಿನ ಅಸಮಾನತೆ ಹಾಗೂ ಅಸ್ಪೃಶ್ಯತೆಯನ್ನು ನಿವಾರಿಸುವ ಅಗತ್ಯವನ್ನು ಒತ್ತಿಹೇಳಿದರು. ನಂತರ ಅವರು ಲಂಡನ್ ಮಿಷನ್ ಪಾಠಶಾಲೆಗೆ ಭೇಟಿ ನೀಡಿ, ಖಾದಿಯ ಮಹತ್ವ ಮತ್ತು ಸ್ವದೇಶಿ ಕೈಗಾರಿಕೆಗಳ ಭಾಗವಾಗಿ ಖಾದಿ ಉದ್ಯಮದ ಅಗತ್ಯತೆಯ ಕುರಿತು ಮಾತನಾಡಿದರು. ಪ್ರತಿಯೊಬ್ಬರೂ ಖಾದಿ ಬಟ್ಟೆಯನ್ನು ಧರಿಸುವ ಮೂಲಕ ಸ್ವದೇಶಿ ಚಳವಳಿಗೆ ಬೆಂಬಲ ನೀಡಬೇಕೆಂದು ಜನರಲ್ಲಿ ಮನವಿ ಮಾಡಿದರು.

ವಾಣಿವಿಲಾಸ ಬಾಲಿಕಾ ಶಾಲೆಯಲ್ಲಿ ಮಾತನಾಡಿದ ಗಾಂಧೀಜಿಯವರು ಮಹಿಳೆಯರ ಹಾಗೂ ಬಾಲಕಿಯರ ಶಿಕ್ಷಣದ ಮಹತ್ವವನ್ನು ವಿವರಿಸಿದರು. ಶಿಕ್ಷಣವು ವ್ಯಕ್ತಿಯ ವೈಯಕ್ತಿಕ ಬೆಳವಣಿಗೆಯಷ್ಟೇ ಅಲ್ಲದೆ, ಸಮಾಜದ ಪ್ರಗತಿಗೂ ಅಗತ್ಯವಾದ ಸಾಧನವೆಂದು ಅವರು ಪ್ರತಿಪಾದಿಸಿದರು.

ಬೆಂಗಳೂರಿನಲ್ಲಿ ಗಾಂಧೀಜಿಯವರು ಮಾಡುತ್ತಿದ್ದ ಭಾಷಣಗಳನ್ನು ತೀತಾ ಶರ್ಮರವರು ಕನ್ನಡಕ್ಕೆ ಅನುವಾದ ಮಾಡುತ್ತಿದ್ದರು. ಅವರ ಪತ್ನಿ ರಾಜಮ್ಮನವರು ೧೯೨೧ರಲ್ಲಿ ಅಹಮದಾಬಾದಿನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಹಾಗೂ ೧೯೨೪ರಲ್ಲಿ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ವೀಣೆಯನ್ನು ನುಡಿಸಿ, ಹಾಡು ಹಾಡಿ ಗಾಂಧೀಜಿಯವರ ಆದರಕ್ಕೆ ಪಾತ್ರರಾಗಿದ್ದರು. ೧೯೨೭ರಲ್ಲಿ ಬೆಂಗಳೂರಿನಲ್ಲಿದ್ದಾಗ ರಾಜಮ್ಮನವರ ಸಂಗೀತ ಕೇಳಲು ಗಾಂಧೀಜಿಯವರು ತೀತಾ ಶರ್ಮ ಅವರಲ್ಲಿ ಕೇಳಿಕೊಂಡಿದ್ದರು. ಗಾಂಧೀಜಿಯವರ ಬೇಡಿಕೆಯಂತೆ ರಾಜಮ್ಮನವರು 'ವೈಷ್ಣವ ಜನ ತೋ' ಮತ್ತು 'ವಂದೇ ಮಾತರಂ' ಹಾಡುಗಳನ್ನು ವೀಣೆಯೊಂದಿಗೆ ಹಾಡಿದ್ದರು.

## ಗಾಂಧೀಜಿಯವರ ಕೊನೆಯ ಬೆಂಗಳೂರು ಭೇಟಿಯ ನೆನಪುಗಳು

೧೯೩೪ರಲ್ಲಿ ಹರಿಜನರ ಉದ್ದಾರಕ್ಕಾಗಿ ನಾನಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡ ಗಾಂಧೀಜಿಯವರು ದೇಶಾದ್ಯಂತ ಪ್ರವಾಸ ಮಾಡುತ್ತಾ ಮೈಸೂರು ಸಂಸ್ಥಾನಕ್ಕೆ ಆಗಮಿಸಿದರು. ಮಲ್ಲೇಶ್ವರದ ಕನ್ನಿಕಾ ದುರ್ಗ ಪರಮೇಶ್ವರ ದೇವಾಲಯಕ್ಕೆ ಭೇಟಿ ನೀಡಿದ ನಂತರ ದಂಡು ಪ್ರದೇಶದಲ್ಲಿನ ಆರ್ ಬಿ ಎ ಎನ್ ಎಂ ಪ್ರೌಢಶಾಲೆಯ ಆವರಣದಲ್ಲೇ ಸುಮಾರು ಐದು ಸಾವಿರ ಜನ ಮಹಿಳೆಯರನ್ನು ಉದ್ದೇಶಿಸಿ

ಮಾತನಾಡಿದರು.

ಹರಿಜನ ಉದ್ಧಾರಕ್ಕಾಗಿ ಎರಡನೇ ಪ್ರವಾಸವನ್ನು ಗಾಂಧೀಜಿಯವರು ೧೯೩೪ರಲ್ಲಿ ಕೈಗೊಂಡರು. ಕರ್ನಾಟಕ ಹಿಂದಿ ಸಮ್ಮೇಳನ ಗಾಂಧೀಜಿಯವರಯಲ್ಲಿ ಅಧ್ಯಕ್ಷತೆ ನಡೆಯಿತು. ಹಿಂದಿ ಭಾಷೆಯ ಪ್ರಚಾರಕ್ಕೆ ಉತ್ತೇಜನ ದೊರಕಿತು. ಟಾಟಾ ವಿಜ್ಞಾನ ಸಂಸ್ಥೆಗೆ ಭೇಟಿಗೂ ನೀಡಿದರು. ದಕ್ಷಿಣ ಭಾರತ ಹರಿಜನ ಕೆಲಸಗಾರರ ಸಮ್ಮೇಳನ ಕೆಂಗೇರಿ ಬಳಿಯ ಗುರುಕುಲಾಶ್ರಮದಲ್ಲಿ ೧೯೩೪ರ ಜೂನ್ ಹತ್ತರಂದು ಮೂರು ದಿನಗಳ ಕಾಲ ನಡೆದಾಗ, ಭಾಗವಹಿಸಿ ಸಂದೇಶ ನೀಡಿದರು.

**ಉಪಸಂಹಾರ**

ದೇಶಾದ್ಯಂತ ಜನಸಾಮಾನ್ಯರಲ್ಲಿ ಸ್ವಾತಂತ್ರ್ಯದ ಅರಿವನ್ನು ಮೂಡಿಸಿ, ಜನಜಾಗೃತಿಗೆ ನಾಂದಿ ಹಾಡಿದ ಮಹಾತ್ಮ ಗಾಂಧೀಜಿಯವರು ಅಸಾಮಾನ್ಯ ವ್ಯಕ್ತಿತ್ವವನ್ನು ಹೊಂದಿದ್ದರೂ, ಸಾಮಾನ್ಯರಂತೆ ಸರಳವಾಗಿ ಬದುಕಿದ ಅಪೂರ್ವ ವ್ಯಕ್ತಿಯಾಗಿದ್ದರು. ತಮ್ಮ ಆದರ್ಶಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡು, ಅವುಗಳನ್ನು ಇತರರೂ ಅನುಸರಿಸುವಂತೆ ಪ್ರೇರೇಪಿಸಿದ ಮಹಾನ್ ಚೇತನರಾಗಿದ್ದರು. ಅಲ್ಪಸಂಖ್ಯಾತರು ಹಾಗೂ ಸಮಾಜದ ಹಿಂದುಳಿದ ವರ್ಗಗಳಿಗೆ ರಾಜಕೀಯ ಸ್ವಾಯತ್ತತೆ, ಆರ್ಥಿಕ ಭದ್ರತೆ ಮತ್ತು ಸಾಮಾಜಿಕ ಸಮಾನತೆ ದೊರಕಿಸುವುದು ಪ್ರತಿಯೊಬ್ಬರ ಸಾಮಾಜಿಕ ಕರ್ತವ್ಯ ಎಂಬ ಅರಿವನ್ನು ಮೂಡಿಸಿದ ಗಾಂಧೀಜಿಯವರ ಚಿಂತನೆಗಳು ಸಾರ್ವಕಾಲಿಕ ಮಹತ್ವವನ್ನು ಪಡೆದಿವೆ. ಅವರ ಸರಳತೆ, ಸತ್ಯನಿಷ್ಠೆ, ಅಹಿಂಸೆ, ಸಮಾನತೆ ಮತ್ತು ಮಾನವೀಯತೆಯಂತಹ ಮೌಲ್ಯಗಳು ಅವರನ್ನು ಎಲ್ಲ ಕಾಲಕ್ಕೂ ಸಲ್ಲುವ ಅಸಾಧಾರಣ ವ್ಯಕ್ತಿತ್ವವನ್ನಾಗಿ ರೂಪಿಸಿದವು.

ಗಾಂಧೀಜಿಯವರ ಬೆಂಗಳೂರು ಭೇಟಿಗಳು ಮೈಸೂರು ಸಂಸ್ಥಾನದ ರಾಜಕೀಯ, ಸಾಮಾಜಿಕ ಮತ್ತು ಸಾರ್ವಜನಿಕ ಜೀವನದ ಮೇಲೆ ಗಮನಾರ್ಹ ಪ್ರಭಾವ ಬೀರಿದವು. ಬೆಂಗಳೂರಿಗೆ ಅವರ ಮೊದಲ ಭೇಟಿ ೧೯೧೫ರಲ್ಲಿ ನಡೆಯಿತು. ಈ ಭೇಟಿಯು ಮೈಸೂರು ಸಂಸ್ಥಾನದಲ್ಲಿ ಗಾಂಧಿಯ ವಿಚಾರಧಾರೆಗೆ ನೆಲೆಯೊದಗಿಸುವಲ್ಲಿ ಮಹತ್ವದ ಪಾತ್ರ ವಹಿಸಿತು. ನಂತರದ ಭೇಟಿಗಳ ಸಂದರ್ಭದಲ್ಲಿ ಅವರು ಸ್ವರಾಜ್ಯ, ಖಾದಿ, ಹಿಂದೂ–ಮುಸ್ಲಿಂ ಐಕ್ಯತೆ, ಅಸ್ಪೃಶ್ಯತಾ ನಿವಾರಣೆ ಮತ್ತು ಮಹಿಳೆಯರ ಸಾಮಾಜಿಕ ಪಾಲ್ಗೊಳ್ಳುವಿಕೆ ಮೊದಲಾದ ವಿಷಯಗಳ ಕುರಿತು ಜನರನ್ನುದ್ದೇಶಿಸಿ ಮಾತನಾಡಿದರು.

ಗಾಂಧೀಜಿಯವರ ಎರಡನೆಯ ಬೆಂಗಳೂರು ಭೇಟಿ ಖಿಲಾಫತ್ ಚಳವಳಿಯ ಹಿನ್ನೆಲೆಯಲ್ಲಿ ಮಹತ್ವ ಪಡೆದಿತ್ತು. ಹಿಂದೂ–ಮುಸ್ಲಿಂ ಐಕ್ಯತೆಯನ್ನು ಬಲಪಡಿಸುವ ಉದ್ದೇಶದಿಂದ ಅವರು ಕೈಗೊಂಡ ಪ್ರವಾಸದ ಭಾಗವಾಗಿ ಈ ಭೇಟಿ ನಡೆದಿತ್ತು. ಧಾರ್ಮಿಕ ಸೌಹಾರ್ದತೆ ಮತ್ತು ರಾಷ್ಟ್ರೀಯ ಏಕತೆಯ ಅಗತ್ಯವನ್ನು ಅವರು ಜನರಿಗೆ ಮನವರಿಕೆ ಮಾಡಿಕೊಟ್ಟರು.

ಮೂರನೆಯ ಭೇಟಿಯ ಸಂದರ್ಭದಲ್ಲಿ ಗಾಂಧೀಜಿಯವರು ಬೆಂಗಳೂರಿನಲ್ಲಿ ನಡೆದ ವಿವಿಧ ಸಭೆ, ಸಮಾರಂಭ ಮತ್ತು ಚಿಂತನ–ಮಂಥನ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು. ಅವರ ಭಾಷಣಗಳು ಜನರಲ್ಲಿ ಹೊಸ ಚೈತನ್ಯವನ್ನು ಮೂಡಿಸಿದವು. ವಿಶೇಷವಾಗಿ ಖಾದಿಯ ಮಹತ್ವ, ಖಾದಿ ಪ್ರಚಾರ, ಹರಿಜನೋದ್ಧಾರ ಮತ್ತು ಸಾಮಾಜಿಕ ಸಮಾನತೆ ಕುರಿತು ಅವರು ನೀಡಿದ ಸಂದೇಶಗಳು ಸಾರ್ವಜನಿಕರಲ್ಲಿ ವ್ಯಾಪಕ ಪ್ರತಿಸ್ಪಂದನೆಯನ್ನು ಉಂಟುಮಾಡಿದವು. ಸ್ವಾತಂತ್ರ್ಯ ಹೋರಾಟವು ಕೇವಲ ರಾಜಕೀಯ ಸ್ವಾತಂತ್ರ್ಯಕ್ಕೆ ಸೀಮಿತವಾಗಿರದೆ, ಸಾಮಾಜಿಕ ಪರಿವರ್ತನೆಯೊಂದಿಗೂ ಅವಿನಾಭಾವ ಸಂಬಂಧ ಹೊಂದಿದೆ ಎಂಬುದನ್ನು ಅವರು ಸ್ಪಷ್ಟಪಡಿಸಿದರು.

ನಾಲ್ಕನೆಯ ಬೆಂಗಳೂರು ಭೇಟಿಯ ಸಂದರ್ಭದಲ್ಲಿ ಹರಿಜನ ಕಲ್ಯಾಣಕ್ಕಾಗಿ ಮೈಸೂರು ಅರಸರು ಕೈಗೊಂಡಿದ್ದ ಸುಧಾರಣಾ ಕ್ರಮಗಳನ್ನು ಗಾಂಧೀಜಿಯವರು ಶ್ಲಾಘಿಸಿದರು. ಹರಿಜನ ನಿಧಿಗಾಗಿ ಗಣನೀಯ ಪ್ರಮಾಣದಲ್ಲಿ ಹಣ ಸಂಗ್ರಹವಾಗಿತ್ತು. ಗಾಂಧೀಜಿಯವರ ಸಭೆಗಳಿಗೆ ಮಹಿಳೆಯರು ವಿಶೇಷ ಆಸಕ್ತಿಯಿಂದ ಭಾಗವಹಿಸುತ್ತಿದ್ದುದು ಗಮನಾರ್ಹವಾಗಿತ್ತು. ಅವರ ಭಾಷಣಗಳಿಂದ ಪ್ರಭಾವಿತರಾದ ಸಾರ್ವಜನಿಕರು ಹರಿಜನ ನಿಧಿಗೆ ಉದಾರವಾಗಿ ನೆರವು ನೀಡಿದರು. ಅಸ್ಪೃಶ್ಯತಾ ನಿವಾರಣೆ ಮತ್ತು ಹಿಂದುಳಿದ ವರ್ಗಗಳ ಉನ್ನತಿಗೆ ಸಂಬಂಧಿಸಿದಂತೆ ಗಾಂಧೀಜಿಯವರ ಸಂದೇಶಗಳು ಜನಮನವನ್ನು ಪರಿವರ್ತಿಸುವಲ್ಲಿ ಪರಿಣಾಮಕಾರಿಯಾಗಿದ್ದವು. ಕೆಳವರ್ಗದವರ ಸಾಮಾಜಿಕ ಉನ್ನತಿಗೆಮೇಲ್ವರ್ಗದವರ ಸಹಕಾರ ಮತ್ತು ಸಕ್ರಿಯ ಪಾಲ್ಗೊಳ್ಳುವಿಕೆ ಅಗತ್ಯವೆಂಬ ವಿಚಾರವನ್ನು ಜನರಲ್ಲಿ ಬಿತ್ತುವಲ್ಲಿ ಅವರು ಯಶಸ್ವಿಯಾದರು.

ಗಾಂಧೀಜಿಯವರ ಕೊನೆಯ ಬೆಂಗಳೂರು ಭೇಟಿಯೂ ಹಲವು ದೃಷ್ಟಿಯಿಂದ ಮಹತ್ವದ್ದಾಗಿತ್ತು. ಈ ಸಂದರ್ಭದಲ್ಲಿ ಅವರ ದಕ್ಷಿಣ ಭಾರತದ ಪ್ರವಾಸದ ಅಂಗವಾಗಿ ಕೆಂಗೇರಿಯ ಗುರುಕುಲ ಆಶ್ರಮದಲ್ಲಿ ಮೂರು ದಿನಗಳ ಕಾಲ ನಡೆದ ದಕ್ಷಿಣ ಭಾರತ ಹರಿಜನ ಕಾರ್ಯಕರ್ತರ ಸಮ್ಮೇಳನದಲ್ಲಿ ಭಾಗವಹಿಸಿದರು. ಇದೇ ಸಂದರ್ಭದಲ್ಲಿ ಹಿಂದಿ ಪ್ರಚಾರ ಸಭೆಯ ಪದವಿ ಪ್ರದಾನ ಸಮಾರಂಭದಲ್ಲಿಯೂ ಅವರು ಭಾಗವಹಿಸಿ, ಹಿಂದಿ ಪ್ರಚಾರ ಕಾರ್ಯದ ಪ್ರಗತಿಯ ಕುರಿತು ಸಂತೃಪ್ತಿ ವ್ಯಕ್ತಪಡಿಸಿದರು.

ಒಟ್ಟಾರೆಯಾಗಿ, ಗಾಂಧೀಜಿಯವರ ಐದು ಬಾರಿ ನಡೆದ ಬೆಂಗಳೂರು ಭೇಟಿಗಳು ನಗರದ ಇತಿಹಾಸದಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದಿವೆ. ಅವರ ಭೇಟಿಗಳು ಕೇವಲ ರಾಜಕೀಯ ಸ್ವಾತಂತ್ರ್ಯದ ಸಂದೇಶವನ್ನು ಸಾರುವುದಕ್ಕೆ ಸೀಮಿತವಾಗಿರಲಿಲ್ಲ. ಅವರ ವಿಚಾರಧಾರೆ ಮೈಸೂರು ಸಂಸ್ಥಾನದ ಸಾರ್ವಜನಿಕ ಜೀವನದಲ್ಲಿ ಹೊಸ ಚಿಂತನೆಗೆ ದಾರಿ ಮಾಡಿಕೊಟ್ಟಿತು. ನಂತರದ ಬ್ರಿಟಿಷ್ ವಿರೋಧಿ ಚಳವಳಿಗಳು ತೀವ್ರಗೊಂಡ ಹಿನ್ನೆಲೆಯಲ್ಲಿ ಗಾಂಧೀಜಿಯವರ ಬೆಂಗಳೂರಿನ ಭೇಟಿಗಳು ಅವರಿಗೆ ಸಾಧ್ಯವಾಗದಿದ್ದರೂ, ಅವರ ಭೇಟಿಗಳಿಗೆ ಸಂಬಂಧಿಸಿದ ಘಟನೆಗಳು ಮತ್ತು ಸ್ಥಳಗಳು ಇಂದಿಗೂ ನಗರದ ಇತಿಹಾಸದಲ್ಲಿ ಅವರ ಸ್ಮೃತಿಯನ್ನು ಜೀವಂತವಾಗಿರಿಸಿವೆ. ಹೀಗಾಗಿ, ಬೆಂಗಳೂರಿನಲ್ಲಿ ಗಾಂಧೀಜಿಯವರು ಬೀರಿದ ಸಾಮಾಜಿಕ ಮತ್ತು ವೈಚಾರಿಕ ಪ್ರಭಾವವು ನಗರದ ಇತಿಹಾಸದ ಅವಿಭಾಜ್ಯ ಅಧ್ಯಾಯವಾಗಿ ಉಳಿದಿದೆ.

**ಸಂದರ್ಭಸೂಚಿ**


೧. ಸೂರ್ಯನಾಥ ಕಾಮತ್: ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೮
೨. ಬೆಂಗಳೂರಿನಲ್ಲಿ ಮಹಾತ್ಮಾ ಗಾಂಧಿ: ವೇಮಗಲ್ ಸೋಮಶೇಖರ್, ಭಾರತೀಯ ವಿದ್ಯಾ ಭವನ, ಬೆಂಗಳೂರು, ೨೦೦೪
೩. ಸ್ವದೇಶಾಭಿಮಾನಿ; ವಾರ ಪತ್ರಿಕೆ, ಮಂಗಳೂರು, ೧೯೨೮

೪. ಬಿ ಷೇಕ್ ಅಲಿ (ಸಂ): ಕರ್ನಾಟಕ ಚರಿತ್ರೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭

೫. ಸತ್ಯವಾದಿ ಸಾಪ್ತಾಯಿಕ, ಮೈಸೂರ, ೧೯೨೭

೬. ಮೈಸೂರು ಸ್ಟಾರ್ ವಾರ ಪತ್ರಿಕೆ, ೧೯೧೫ -೧೯೨೦

೭. ಸಂಯುಕ್ತ ಕರ್ನಾಟಕ, ೧೪ - ೦೬ -೧೯೩೬

೮. ನ್ಯಾಷನಲ್ ಹೈಸ್ಕೂಲ್ ಬಸವನಗುಡಿ ಸುವರ್ಣ ಮಹೋತ್ಸವ ಸ್ಮರಣ ಸಂಚಿಕೆ ೧೯೧೭ -೧೯೯೨

೯. ಉದಯವಾಣಿ (ನಮ್ಮ ಬೆಂಗಳೂರು) ೨೦ -೦೧ -೨೦೦೨